
ಪದಬಂಧ



ಎಡದಿಂದ ಬಲಕ್ಕೆ:

1. ವೇಷವನ್ನೆಲ್ಲ ನಾಶ ಮಾಡಿತು 'ಪ್ರಾಣಹಾರಕ ಗಾಳಿ' (4)
3. ಸ್ವರೂಪವನ್ನಷ್ಟೇ ಪರಿಗಣಿಸಿದರೆ ಸುಂದರ ವ್ಯಕ್ತಿ ಹೌದು (3)
4. ತಾಲ್ಲೂಕುಗಳ ಹೆಸರುಗಳೆಲ್ಲ ಬರೆಯಲ್ಪಟ್ಟಿವೆ (3)
6. ನೋವನ್ನು ತೆಗೆಯಬಲ್ಲದೇ ಬೆಣ್ಣೆ? (4)
7. ನಮಿಸುವ ಮುನ್ನ ಸಮರ್ಪಿಸಿದ್ದು 'ಕಾಡಿನ ಹೂವು' (4)
8. ಸಂಚಿಗೆ ತಕ್ಕಂತೆ ಕುಗ್ಗಿಸಲ್ಪಟ್ಟದ್ದು ಹೇಗೆ? (4)
10. ಮುನ್ನಡೆಯನ್ನು ಸಾಧಿಸಲು ವಿನೀತ ವರ್ತನೆಯೂ ಬೇಕು ತಾನೇ?(4)
12. ಶಪಥ ಮಾಡದಿದ್ದರೇನು? ಅದಂತೂ ನೂರು ಕಾಲುಗಳ ಜೀವಿ (4)
14. ಬೇವನ್ನು ಬಳಸುವಲ್ಲಿ ಅವನು ಪರಿಶ್ರಮ ಹೊಂದಿದ್ದಾನೆ (4)
16. ಕೋಟಿ ಹಣ ಗಳಿಸುವುದು ಸುಲಭವೇನಲ್ಲ (3)
17. ಮೂರೇ ಅಕ್ಷರವಿದ್ದರೂ ತೀರ ಅಪಾಯಕಾರಿ (3)
18. ಮುಕುಟವನ್ನು ಧರಿಸಿದ್ದರೂ ಮನಸ್ಸು ಮಾತ್ರ ಒರಟು, ಕ್ರೂರ (4)

ಮೇಲಿಂದ ಕೆಳಕ್ಕೆ:

1. ವ್ಯಾಪಾರವನ್ನು ತ್ಯಜಿಸಿದರೆ ಅಡವಿಯೇ ಗತಿ (3)
2. ತೇಲಲೆಂದು ರೂಪಿಸಿದ್ದು ಸರಳ, ಸುಂದರ (3)
3. ಸರಸರನೆ ಎದುರಾದ ದೇವ-ದಾನವ (4)
5. ಕಡತ ಬೇಕೇ ಬೇಕು. ಹುಡುಕಾಡು (3)
7. ಅವನ ತಮ್ಮನ ಸದ್ಯದ ಸಮಾಚಾರ ಏನು? (4)
9. ಬಂಧಿತರ ಹರತಾಳ ನಿಯಂತ್ರಣದಲ್ಲಿದೆ (4)
11. ಅಂಥ ಕೆಡುಕನನ್ನು ನೆನೆದರೇ ಗಡಗಡ (3)
13. ಅತಿರೇಕ ಏನಿದ್ದರೂ ಹೊರಗೆ ಪ್ರಕಟಿಸುವಂಥದಲ್ಲ (4)
14. ಕೆಣಕುವಂತೆ ಅದೇ ಅನುಕರಣೆ (3)
15. ಮೇವನ್ನು ಸಾಗಿಸಲು ಹಾರುವ ವಾಹನವೇ? (3)

## 13-2-14ರ ಉತ್ತರಗಳು

ಎಡದಿಂದ ಬಲಕ್ಕೆ:

1. ವಸಂತ; 3. ಅವನಿ; 4. ನಸುಕು; 6. ಮರುಯತ್ನ; 7. ಉಪದ್ರವ; 9. ನಯನೀತಿ; 11. ಸಮರ್ಥನ; 15. ವಟಾರ (=ವಠಾರ); 16. ಗುರುತ್ವ; 17. ಭ್ರಮರ.


ಮೇಲಿಂದ ಕೆಳಕ್ಕೆ:

1. ವನಿತೆ; 2. ತನಯ; 3. ಅಪಾಯ; 5. ಕುರೂಪ; 6. ಮರ್ದನ; 8. ವಸನ; 10. ನೀರವ; 12. ಮಹತ್ವ; 13. ನಿರಭ್ರ; 14. ಭಂಗುರ.

# ಆನೆಗಳಲ್ಲೂ ಉಂಟೇ ಶಬ್ದ-ಧ್ವನಿ ಭಾಷೆ?

ಖಂಡಿತ ಉಂಟು. ಅದರಲ್ಲಿ ಸಂಶಯವೇ ಬೇಡ. ವಾಸ್ತವ ಏನೆಂದರೆ ಘೀಳಿಡುವ, ಗುರುಗುಡುವ, ಹಾಗೆ ನಮಗೆ ಕೇಳಿಸುವ ಭಾರೀ ಶಬ್ದಗಳನ್ನಷ್ಟೇ ಅಲ್ಲದೆ ಆನೆಗಳು ಸದ್ದು-ಗದ್ದಲ ರಹಿತವಾದ, ಆದರೆ ಶಬ್ದ ಸಂಕೇತಗಳದ್ದೇ ಆದ ವಿಶಿಷ್ಟ 'ಭಾಷೆ'ಯನ್ನು ಹೊಂದಿವೆ. ಇಪ್ಪತ್ತರಿಂದ ಒಂದು ನೂರು ಸದಸ್ಯರ ಪ್ರತಿ ಹಿಂಡಿನ ಎಲ್ಲ ಆನೆಗಳೂ ಒಂದರೊಡನೆನೊಂದು ನಿರಂತರ ಸಂಪರ್ಕದಲ್ಲಿರಲು ಈ ಭಾಷೆಯನ್ನು ಬಳಸುತ್ತವೆ. ಅಡವಿ-ಹುಲ್ಲು ಬಯಲುಗಳಲ್ಲಿ ಒಂದರಿಂದ ಮತ್ತೊಂದು ಕಿಲೋ ಮೀಟರ್‌ಗಳಷ್ಟು ದೂರ ದೂರ ಚದರಿ ಆಹಾರ ಅರಸುವ ಒಂದೇ ಹಿಂಡಿನ ಪ್ರತಿ ಆನೆಯೂ ಉಳಿದೆಲ್ಲ ಸದಸ್ಯರೊಡನೆ ಸಂಪರ್ಕದಲ್ಲಿರಲು, ಒಂದೇ ಸಮಯಕ್ಕೆ ಗುಂಪುಗೂಡಲು, ಅಪಾಯದ ಸೂಚನೆ ಘೋಷಿಸಲು, ತೊಂದರೆಗೆ ಸಿಲುಕಿದಾಗ ಸಹಾಯ ಕೋರಲು... ಇಂಥವೆಲ್ಲ ಹತ್ತಾರು ಕಾರಣಗಳಿಗಾಗಿ ತಮ್ಮದೇ ವಿಶಿಷ್ಟ ಧ್ವನಿ-ಶಬ್ದ ಸಂಕೇತಗಳ ಸಮರ್ಥ ಭಾಷೆಯನ್ನು ಆನೆಗಳು ಪಡೆದಿವೆ, ಬಳಸುತ್ತಿವೆ.

ವಿಸ್ಮಯ ಏನೆಂದರೆ ಆನೆಗಳ ಈ ಭಾಷೆ, ಈ ಸಂಭಾಷಣೆ, ಈ ಮಾತುಕತೆ ಎಷ್ಟೇ ಸನಿಹದಿಂದಲೂ ನಮಗೆ ಕೇಳಿಸುವುದಿಲ್ಲ. ಏಕೆಂದರೆ ಅವು ಬಳಸುವ ಶಬ್ದ ನಮ್ಮ ಶ್ರವಣ ಶಕ್ತಿಯ ವ್ಯಾಪ್ತಿಗೆ ಬರದ 'ಇನ್‌ಫ್ರಾ ಸೌಂಡ್' ವರ್ಗದ್ದು! ನಿಮಗೇ ತಿಳಿದಂತೆ ಶಬ್ದ ಅಲೆಗಳ ರೂಪದಲ್ಲಿ ಪ್ರವಹಿಸುತ್ತದೆ. ಶಬ್ದದ ತರಂಗಗಳ ಕಂಪನ ವೇಗ ಅದರ ತೀವ್ರತೆಯನ್ನು ನಿರ್ಧರಿಸುತ್ತದೆ. ಶಬ್ದದ ಅಲೆಗಳ ಕಂಪನಾಂಕ ಮುವ್ವತ್ತು ಹರ್ಟ್ಜ್‌ನಿಂದ ಹದಿನೆಂಟು ಸಾವಿರ ಹರ್ಟ್ಜ್ ನಡುವೆ ಇದ್ದರೆ ಮಾತ್ರ (ಹರ್ಟ್ಜ್ ಎಂದರೆ ಪ್ರತಿ ಸೆಕೆಂಡ್‌ನಲ್ಲಾಗುವ ಕಂಪನಗಳ ಸಂಖ್ಯೆ) ಅಂಥ ಶಬ್ದ ನಮಗೆ ಕೇಳಿಸುತ್ತದೆ. ಹದಿನೆಂಟು ಸಾವಿರ



ಹರ್ಟ್ಜ್ ಮೀರಿದ ಶಬ್ದ 'ಅಲ್ಟ್ರಾ ಸೌಂಡ್'; ಮುವತ್ತು ಹರ್ಟ್ಜ್‌ಗಿಂತ ಕಡಿಮೆಯದು 'ಇನ್‌ಫ್ರಾ ಸೌಂಡ್.' ಈ ಎರಡೂ ವರ್ಗಗಳ ಶಬ್ದ ನಮಗೆ ಕೇಳಿಸುವುದಿಲ್ಲ.

ಇನ್‌ಫ್ರಾ ಸೌಂಡ್‌ನಲ್ಲಿ ಸಂಭಾಷಿಸುವುದರಿಂದ ಆನೆಗಳಿಗೆ ವಿಶೇಷ ಪ್ರಯೋಜನ ಏನು?

ಸಾಮಾನ್ಯ ಶಬ್ದದಂತೆ- ಎಂದರೆ ನಮ್ಮ ಶ್ರವಣ ವ್ಯಾಪ್ತಿಯ ಶಬ್ದ ತರಂಗಗಳಂತೆ- ಇನ್‌ಫ್ರಾ ಸೌಂಡ್ ಕ್ಷಿಪ್ರವಾಗಿ ಅಲ್ಪ ದೂರಗಳಲ್ಲೇ ದುರ್ಬಲಗೊಳ್ಳುವುದಿಲ್ಲ; ಬೀಸುವ ಗಾಳಿಯಿಂದ ಚದುರುವುದಿಲ್ಲ; ಗಿಡ-ಮರ-ವೃಕ್ಷಗಳಂಥ ಅಡೆತಡೆಗಳಿಂದ ಕ್ಷೀಣಿಸುವುದಿಲ್ಲ, ಮಾರ್ದನಿಗೊಳ್ಳುವುದಿಲ್ಲ. ಹಾಗೆಂದರೆ ಸ್ಪಷ್ಟವಾಗಿಯೇ ಈ ವರ್ಗದ ಶಬ್ದದ ಅಲೆಗಳು ಆನೆಗಳ ನೈಸರ್ಗಿಕ ನೆಲೆಗಳಾದ ಅಡವಿ ಪ್ರದೇಶ ಮತ್ತು ಹುಲ್ಲು ಬಯಲುಗಳಲ್ಲಿ ಶಕ್ತಿಯುತವಾಗಿ ಬಹು ದೂರ ಸಾಗುತ್ತವೆ; ಗ್ರಹಿಸಬಲ್ಲವರಿಗೆ ಹಲವಾರು ಕಿ.ಮೀ. ದೂರದವರೆಗೂ ಸ್ಪಷ್ಟವಾಗಿ ಕೇಳಿಸುತ್ತದೆ. 'ಸದ್ದಿಲ್ಲದ ಶಬ್ದ'ದ ಎಂಥ ಅದ್ಭುತ!

■ ಎನ್. ವಾಸುದೇವ್